**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ. 1728/2017**

ಪಿರ್ಯಾದುದಾರರು:–   ನಂದಗುಡಿ ಪೋಲೀಸ್ ಠಾಣೆ, ಹೊಸಕೋಟೆ

ವಿರುದ್ದ

ಆರೋಪಿಗಳು:–   1. ರಾಮಕ್ಕ ಬಿನ್ ಮರಿಯಪ್ಪ, 55 ವರ್ಷ
2. ಅಂಬರೀಷ ಬಿನ್ ಮರಿಯಪ್ಪ, 28 ವರ್ಷ
ಇಬ್ಬರ ವಾಸ: ಲಿಂಗಾಪುರ ಗ್ರಾಮ,
ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು.

**ದೋಷಾರೋಪಣೆ**

ಶ್ರೀ ಗಿರೀಶ ಆರ್.ಬಿ., ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಗಳಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿ:13.03.2017 ರಂದು ಸಂಜೆ 6.00 ಘಂಟೆ ಸಮಯದಲ್ಲಿ ಹೊಸಕೋಟೆ ತಾಲ್ಲೂಕು, ನಂದಗುಡಿ ಪೊಲೀಸ್ ಠಾಣಾ ಸರಹದ್ದು, ಲಿಂಗಾಪುರ ಗ್ರಾಮದ ವಾಸಿ ನಾರಾಯಣಸ್ವಾಮಿರವರ ವಾಸದ ಮನೆಯ ಪಕ್ಕದಲ್ಲಿರುವ ಸಾರ್ವಜನಿಕ ಬೋರ್‌ವೆಲ್ ಬಳಿ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಬೋರ್‌ವೆಲ್‌ನಲ್ಲಿ ನೀರು ಹಿಡಿದುಕೊಳ್ಳುವ ವಿಚಾರದಲ್ಲಿ ಚಾ.ಸಾ.1ರವರು ಸರದಿ ಸಾಲಿನಲ್ಲಿ ಬಿಂದಿಗೆಯನ್ನು ಇಟ್ಟುಕೊಂಡು ನಿಂತಿರುವಾಗ 1ನೇ ಆರೋಪಿಯಾದ ನೀವು ನಿಮ್ಮ ಬಿಂದಿಗೆಯನ್ನು ತಂದು ಮುಂದೆ ಇಟ್ಟಿದ್ದು, ಅದನ್ನು ಕೇಳಲು ಬಂದ ಚಾ.ಸಾ.1ರವರಿಗೆ ಸೂಳೆ ಮುಂಡೆ, ಬೇವರ್ಸಿ ಮುಂಡೆ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆ ಮೂಲಕ ನೀವು ಭಾ.ದಂ.ಸಂ. ಕಲಂ.504ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಅದೇ ದಿನ, ಅದೇ ಸಮಯದಲ್ಲಿ, 1ನೇ ಆರೋಪಿಯಾದ ನೀವು ಬಿಂದಿಗೆಯಿಂದ ಚಾ.ಸಾ.1ರವರಿಗೆ ಹೊಡೆದಿರುತ್ತೀರಿ. 2ನೇ ಆರೋಪಿಯಾದ ನೀವು ಚಾ.ಸಾ.1ರವರಿಗೆ ನೀಲಗಿರಿ ದೊಣ್ಣೆಯಿಂದ ಚಾ.ಸಾ.1ರವರ ಕೈಗಳ ಮೇಲೆ, ಹಣೆಯ ಮೇಲೆ ಹೊಡೆದಿದ್ದು, ಬಿಡಿಸಲು ಬಂದ ಚಾ.ಸಾ.2ರವರಿಗೆ ಕೂಡ ನೀಲಗಿರಿ ದೊಣ್ಣೆಯಿಂದ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ನೀವು ಭಾ.ದಂ.ಸಂ. ಕಲಂ.324ರ ಸಹವಾಚಕ 34ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ದೋಷಾರೋಪವನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದು ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ. 1728/2017**

ಪಿರ್ಯಾದುದಾರರು:– ನಂದಗುಡಿ ಪೋಲೀಸ್ ಠಾಣೆ, ಹೊಸಕೋಟೆ

ವಿರುದ್ಧ

ಆರೋಪಿಗಳು:–
1. ರಾಮಕ್ಕ ಬಿನ್ ಮರಿಯಪ್ಪ, 55 ವರ್ಷ
2. ಅಂಬರೀಷ ಬಿನ್ ಮರಿಯಪ್ಪ, 28 ವರ್ಷ

ಇಬ್ಬರ ವಾಸ: ಲಿಂಗಾಪುರ ಗ್ರಾಮ,
ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು.

**ದೋಷಾರೋಪಣೆ**

ಪ್ರಶ್ನೆ 1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?

ಉತ್ತರ:

ಪ್ರಶ್ನೆ 2: ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ:

ಮೇಲ್ಕಂಡ ಆಪಾದನೆಯನ್ನು ಆರೋಪಿಗಳಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿ:07.11.2019ರಂದು ಧೃಢೀಕರಿಸಿದ್ದೇನೆ.

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**